**ಇಂದು ದಿನಾಂಕ:** 01.07.2025 **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ. ಜೆ.ಎಸ್.ಎನ್. ವಕೀಲರಿಂದಃ**

ನನಗೆ ಒಟ್ಟು 5 ಜನ ಮಕ್ಕಳು. ಅವರೆಂದರೆ ತಿಮ್ಮಪ್ಪ, ಶಿವಣ್ಣ, ನಿಂಗಣ್ಣ, ಅಣ್ಣಯ್ಯ ಮತ್ತು ರಾಮಕೃಷ್ಣ, ರೇಣುಕ. ಈ ಕೇಸಿನ ವಾದಿಯಿಂದ ವಿಶೇಷ ಅಧಿಕಾರ ಪತ್ರ ಪಡೆದಿರುವ ಸುನಂದ ವಾದಿಯ ಹೆಂಡತಿ ಎಂದರೆ ಸರಿ. ನನ್ನ ಯಜಮಾನರು ಮತ್ತು ಅವರ ಅಣ್ಣ ತಮ್ಮಂದಿರು ವಿಭಾಗವನ್ನು ನೊಂದಣಿ ಮಾಡಿಸಿಕೊಂಡಿಲ್ಲ. ದಾವಾ ಆಸ್ತಿಗಳೆಲ್ಲವೂ ಒಟ್ಟು ಕುಟುಂಬ ಮತ್ತು ಪಿತ್ರಾರ್ಜಿತ ಸ್ವತ್ತುಗಳೆಂದರೆ ಸರಿ. ದಾವಾ ಆಸ್ತಿಗಳು ಈಗಲೂ ಸಹ ನನ್ನ ಯಜಮಾನರ ಹೆಸರಿನಲ್ಲಿವೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿಗೂ ಸಹ ಭಾಗಾಂಶದ ಹಕ್ಕು ಇದೆ ಎಂದರೆ ಯಾರಿಗೂ ಹಂಚಿಕೆಯಾಗಿಲ್ಲ. ವಾದಿಯ ಭಾಗ ಕೊಡಲು ನನ್ನದೇನು ತೊಂದರೆ ಇರುವುದಿಲ್ಲ. ನನ್ನ ಮಗ ಖರೀದಿ ಮಾಡಿದ್ದಾನೆ. 2 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಪತ್ರ ಇರುವುದಿಲ್ಲ. ದಾವಾ ಆಸ್ತಿಯ ಆದಾಯ ಮತ್ತು ವೆಚ್ಚದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂಬರ್ 7 ರಿಂದ 17 ರಲ್ಲಿ ಬರುವ ಆದಾಯದಿಂದ ನನ್ನ ಯಜಮಾನರು ದಾವಾ ಐಟಂ ನಂಬರ್ 1 ರಿಂದ 6 ರಲ್ಲಿರುವ ಆಸ್ತಿಗಳನ್ನು ಖರೀದಿಸಿದ್ದಾರೆ ಎಂದರೆ ಸರಿ. ಆದ್ದರಿಂದ ದಾವಾ ಆಸ್ತಿಗಳೆಲ್ಲವೂ ಕರೀಗೌಡರಿಗೆ ಸೇರಿವೆ ಎಂದರೆ ಸರಿ. ದಾವಾ ಸಲ್ಲಿಸಿದ ನಂತರ 2 ನೇ ಪ್ರತಿವಾದಿ ಯಾವುದೇ ಪತ್ರ ಮಾಡಿರುವುದಿಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ. ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**